# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ  ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು

**ಸಿ.ಸಿ ನಂ.992/2020** **ಡಿ. ಡಬ್ಲ್ಯುಃ 1**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಧರ್ಮೇಶ್<br>ಬದನವಾಳು ಗ್ರಾಮ, ನಂಜನಗೂಡು |
| | **ಸತ್ಯ ಪ್ರತಿಜ್ಞೆಯ ಮೇರೆಗೆ  ದಿನಾಂಕ 17-09-2025** |

**ಮುಂದುವರೆದ ಮುಖ್ಯ ವಿಚಾರಣೆ  ಶ್ರೀ ಎನ್ ಎಸ್  ವಕೀಲರಿಂದಃ**

ಪಿರ್ಯಾದಿ ನನಗೆ ಎರಡು ಲಕ್ಷ ರೂಪಾಯಿಗಳನ್ನು ಕೊಟ್ಟಿರುವುದಿಲ್ಲ ಹಾಗೂ ನಾನು ಪಡೆದುಕೊಂಡಿರುವುದಿಲ್ಲ. ಮತ್ತು ಇಷ್ಟು ಜಾಸ್ತಿ ಹಣವಿನ ಅವಶ್ಯಕತೆ ನನಗೆ ಸಹ ಇರುವುದಿಲ್ಲ. ದಿಃ 31-05-2020 ರಂದು ನಾನು ಅವರಿಗೆ ಭೇಟಿ ಸಹಿ ಮಾಡಿರುವುದಿಲ್ಲ. ಮತ್ತು ನಾನು ದಿಃ 04-11-2020 ರಂದು ಚೆಕ್ ಸಹ ನೀಡಿರುವುದಿಲ್ಲ . ಅವರು ನನಗೆ ನೋಟೀಸ್ ಕೊಟ್ಟಿದ್ದಾಗ ನಾನು ಅವರಿಗೆ ಯಾಕೆ ನೋಟೀಸು ಕೊಟ್ಟಿದ್ದೀರಾ ಎಂದು ಸಹ ಕೇಳಿದೆ. ಸದರಿ ನೋಟೀಸು ಬಗ್ಗೆ ಕೇಳುವಾಗ ನನ್ನ ತಂದೆ ತಾಯಿ ನನ್ನ ಜೊತೆ ಇದ್ದರು. ನನ್ನ ತಾಯಿ ಪಿರ್ಯಾದಿ ರವರ ವಿರುದ್ಧ ಅಸಲು ದಾವೆಯನ್ನು ಹೂಡಿರುತ್ತಾರೆ. ಪಿರ್ಯಾದಿ ಸದರಿ ಅಸಲು ದಾವೆಯನ್ನು ವಾಪಸ್ಸು ಪಡೆದುಕೊಂಡರೆ ನಾನು ಈ ದಾವೆಯನ್ನು ವಾಪಸ್ಸು ಪಡೆಯುತ್ತೇನೆ ಎಂದು ಹೇಳಿದರು. ನಾನು ಸಾಲದ ಭದ್ರತೆಗಾಗಿ ಪಿರ್ಯಾದಿದಾರರಿಗೆ ಇನ್ನು ಎರಡು ಚೆಕ್ ಗಳನ್ನು ನೀಡಿರುತ್ತೇನೆ. ಮತ್ತು ಪಿರ್ಯಾದಿದಾರರು ಈ ಎರಡು ಚೆಕ್ ಗಳು ನನ್ನ ಬಳಿ ಇವೆ ಎಂದು ನನಗೆ ಬೆದರಿಕೆ

ಹಾಕಿ ಬೇರೆಯವರಿಂದ ದಾವೆಯನ್ನು ದಾಖಲು ಮಾಡುತ್ತೇನೆ ಎಂದು ಹೇಳಿರುತ್ತಾರೆ. ಆದ್ದರಿಂದ ನಾನು ಯಾವುದೇ ತಪ್ಪನ್ನು ಮಾಡಿರುವುದಿಲ್ಲ.

**ಮರು ವಿಚಾರಣೆ ಇಲ್ಲ.**

(**ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು**)

**ಓ . ಹೇ. ಕೇ. ಸರಿ. ಇದೆ**

**2 ನೇ ಕಿ.ಪ್ರ.ದ. ನ್ಯಾ ದಂ. ನಂಜನಗೂಡು**